## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ. 1776/2025**

**ಸಿ.ಡಬ್ಲ್ಯೂ 9, ಪಿ.ಡಬ್ಲ್ಯೂ 5**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶಂಕರ ಮುರ್ಡೇಶ್ವರ ನಾಯ್ಕ** |
| **ತಂದೆಯ ಹೆಸರು** | : | **ಮುರ್ಡೇಶ್ವರ ನಾಯ್ಕ** |
| **ವಯಸ್ಸು** | : | **48 ವರ್ಷ** |
| **ಉದ್ಯೋಗ** | : | **ಹೊಟೇಲ ಕೆಲಸ** |
| **ವಾಸ** | : | **ಉತ್ತರಕೊಪ್ಪ, ಹೆಗಡೆಗದ್ದೆ** |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 02-04-2026**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದಃ-**

ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನಾನು ಗುರುತಿಸುತ್ತೇನೆ. ನನಗೆ ಚಾಸಾ-1 ರವರ ಪರಿಚಯ ಇದೆ. ಅದೇ ರೀತಿ ಚಾಸಾ-8 ಮತ್ತು 10 ರವರ ಪರಿಚಯ ಇರುತ್ತದೆ.

ದಿನಾಂಕ 26.05.2025 ರಂದು ಮಧ್ಯಾಹ್ನ 12.30 ರ ಸುಮಾರಿಗೆ ನಾನು ಬೈಕ್ ನಲ್ಲಿ ಭಟ್ಕಳಕೆ ಬರುತ್ತಿದ್ದೆನು. ಮಳೆ ಬರುತ್ತಿತ್ತು ಆ ಕಾರಣಕ್ಕಾಗಿ ನಾನು ನನ್ನ ವಾಹನವನ್ನು ಬಸ್ತಿ ಹತ್ತಿರ ರಸ್ತೆಯ ಬದಿಗೆ ನಿಲ್ಲಿಸಿದೆನು. ಐದು ನಿಮಿಷಗಳ ನಂತರ ಹೊನ್ನಾವರ ಕಡೆಯಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ಸ ಒಬ್ಬ ಮಹಿಳೆ ರಸ್ತೆ ದಾಟಿ ಡಿವೈಡರ್ ಬಳಿ ಇದ್ದಾಗ ಡಿಕ್ಕಿಪಡಿಸಿದ ಶಬ್ದ ಕೇಳಿಸಿತ್ತು. ಆಗ ಮಹಿಳೆ ಕೆಳಗೆ ಬಿದ್ದಿದ್ದಳು. ತಕ್ಷಣ ನಾನು ಮತ್ತು ಅಟೋ ಚಾಲಕ ಶ್ರೀಧರ ಚಾಸಾ-8 ರವರು ಸೇರಿಕೊಂಡು ಒಂದು ಅಟೋದಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಭಟ್ಕಳಕ್ಕೆ ಬಂದೆನು. ಸದ್ರಿ ಮಹಿಳೆಗೆ ತಲೆಗೆ ಮತ್ತು ಮೈಗೆ ಗಾಯಗಳಾಗಿದ್ದವು. ಬಸ್ಸ ನಂಬರ ಕೆಎ-31-ಎಫ್-1356 ಆಗಿತ್ತು. ಅಪಘಾತವು ಬಸ್ಸಿನ ಚಾಲಕನ ತಪ್ಪಿನಿಂದ ಆಗಿರುತ್ತದೆ. ಸಾಕ್ಷಿ ಮುಂದುವರಿದು ಅಪಘಾತದ ಸಮಯದಲ್ಲಿ ಮಳೆ ಜಾಸ್ತಿ ಬರುತ್ತಿತ್ತು, ವಾತಾವರಣ ಮಂಜಾಗಿತ್ತು ಎಂದು ನುಡಿಯುತ್ತಾರೆ. ಆಪಾದಿತ ಬಸ್ಸ ವೇಗವಾಗಿ ಬಂದು ಡಿಕ್ಕಿಪಡಿಸಿರುತ್ತದೆ. ನಾನು ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುತ್ತೇನೆ.

ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಅದು ವಾಹನ ತಡೆ ಪಂಚನಾಮೆ ಇದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-7(ಬಿ)

ಎಂದು ಗುರುತಿಸಲಾಯಿತು. ನಿಪಿ–7 ಕ್ಕೆ ಪೊಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆಗ ಫೋಟೊ ತೆಗೆದಿರುತ್ತಾರೆ. ಈಗ ತೋರಿಸುತ್ತಿರುವ ಫೋಟೊದಲ್ಲಿ ನಾನು ಇರುತ್ತೇನೆ. ಅದನ್ನು ಈಗಾಗಲೇ ನಿಪಿ–8 ಎಂದು ಗುರುತಿಸಲಾಗಿದೆ. ನಿಪಿ– 7 ಕ್ಕೆ ದಿನಾಂಕ 03.06.2025 ರಂದು ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ 1.30 ರವರೆಗೆ ಮಾಡಿರುತ್ತಾರೆ. ನನ್ನೊಂದಿಗೆ ಚಾಸಾ–4 ಮತ್ತು ಚಾಸಾ–5 ರವರು ಇದ್ದರು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಹೆಚ್.ಎನ್. ವಕೀಲರಿಂದಃ**

ನಾನು ಮೂರನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುತ್ತೇನೆ. ನಾನು ಅಂಗಡಿ ಹತ್ತಿರ ನಿಂತಿದ್ದೆನು. ಅಪಘಾತವಾದ ಶಬ್ದ ಕೇಳಿ, ಅಪಘಾತ ಆದ ಬಗ್ಗೆ ಗೊತ್ತಾಗಿರುತ್ತದೆ. ಅದರ ಮೊದಲು ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ಮೇಲೆ ಹೇಳಿದಂತೆ ಹೇಳಿರುತ್ತೇನೆ. ಪೊಲೀಸರು ದಾಖಲಿಸಿಕೊಂಡ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ ಏಕೆಂದರೆ ನನಗೆ ಓದಲು ಬರೆಯಲು ಬರುವುದಿಲ್ಲ.

ಅಪಘಾತವು ಆರೋಪಿಯ ತಪ್ಪಿನಿಂದ ಆಗಿದೆ ಎಂದು ನಾನು ಅಂದಾಜಿನ ಮೇಲೆ ಹೇಳಿರುವುದಿಲ್ಲ. ಅಪಘಾತದ ಸ್ಥಳವು ಚತುಸ್ಪದ ರಸ್ತೆ ಆಗಿರುತ್ತದೆ. ಮೃತಳು ಹೊನ್ನಾವರ ಕಡೆಯಿಂದ ಭಟ್ಕಳ ಕಡೆಗೆ ಬರುವ ರಸ್ತೆಯ ಡಿವೈಡರ್ ದಾಟಿದ ನಂತರ ಬಿದ್ದಿದ್ದಳು. ಪೊಲೀಸರು ಅಪಘಾತ ಆದ ಸ್ಥಳ ಯಾವುದು ಎಂದು ನನಗೆ ಕೇಳಿರುತ್ತಾರೆ. ಪೊಲೀಸರು ನನ್ನನ್ನು ಗುನ್ನಾ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ಅಪಘಾತವು ಡಿವೈಡರ್ ದಿಂದ ಮೂರು ಅಡಿ ಅಂತರದಲ್ಲಿ ಆಗಿರುತ್ತದೆ. ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ, ಬದಲಾಗಿ ಮೃತಳು ಅಚಾನಕ್ ಆಗಿ ರಸ್ತೆ ದಾಟುತ್ತಿರುವುದರಿಂದ ಅವಳ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಆದರೂ ಸಹ ಮೃತಳ ಸಂಬಂಧಿಕರಿಗೆ ಚಾಸಾ–1 ರವರ ಮಾತು ಕೇಳಿ ಪರಿಹಾರ ಸಿಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ತೆ. ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಭಟ್ಕಳ.**